# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : 677 (699) |
| **ಸದಸ್ಯರ ಹೆಸರು** | : ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : 19-09-2022 |
| **ಉತ್ತರಿಸುವ ಸಚಿವರು** | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಪ್ರಾಥಮಿಕ ಶಾಲೆಯ ಹಾಗೂ ಪ್ರೌಢ ಶಾಲೆಗಳ ಶಿಕ್ಷಕರುಗಳನ್ನು "ಎರವಲು ಸೇವೆ" (ಡೆಪ್ಯುಟೇಷನ್) ಮೇಲೆ ಕಳುಹಿಸುವ/ ನಿಯೋಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಇಲ್ಲ |
| ಆ. | ಹಾಗಿದ್ದಲ್ಲಿ, ಸದರಿ ಶಿಕ್ಷಕರುಗಳನ್ನು ಎರವಲು ಸೇವೆಗೆ ಕಳುಹಿಸುವ/ನಿಯೋಜಿಸುವ ಅಧಿಕಾರ BEO ಅಥವಾ DDPI ಅಧಿಕಾರಿಗಳಿಗೆ ಇದೆಯೇ ಅಥವಾ ನೀಡಲಾಗಿದೆಯೇ; | ಇಲ್ಲ |
| ಇ. | ಇಲ್ಲದಿದ್ದಲ್ಲಿ, ಸದರಿ ಶಿಕ್ಷಕರುಗಳನ್ನು ಎರವಲು/ನಿಯೋಜಿಸಲು ಇರುವ ಮಾನದಂಡಗಳಾವುವು; | ಉದ್ಭವಿಸುವುದಿಲ್ಲ |
| ಈ. | ಇಲ್ಲದಿದ್ದಲ್ಲಿ, ತಾಲ್ಲೂಕು ಮಟ್ಟದಲ್ಲಿ ಶಿಕ್ಷಕರುಗಳ ಕೊರತೆ ನೀಗಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳಾವುವು? (ಸಂಪೂರ್ಣ ವಿವರ ನೀಡುವುದು) | • ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಒಟ್ಟು 27,000 ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ಗೌರವ ಸಂಭಾವನೆ ಪಾವತಿಸುವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br>• ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರತಿ ವರ್ಷವೂ |

| | | |
|---|---|---|
| | | ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಪ್ರಸ್ತುತ ವರ್ಷ ಒಟ್ಟು 5,159 ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗಿದೆ.<br>• ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ 31.01.2021ರ ಅಂತ್ಯಕ್ಕೆ ಖಾಲಿ ಇದ್ದ 25,813 ಹುದ್ದೆಗಳ ಪೈಕಿ ಒಟ್ಟು 15,000 ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8 ನೇ ತರಗತಿ) ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಪತ್ರ ಸಂಖ್ಯೆ ಇಪಿ 89 ಪಿಬಿಎಸ್ 2021 ದಿನಾಂಕ 03.02.2022 ರಲ್ಲಿ (ಕಲ್ಯಾಣ ಕರ್ನಾಟಕದ 5,000 ಹುದ್ದೆಗಳು ಹಾಗೂ ಉಳಿಕೆ ಮೂಲ ವೃಂದದ 10,000) ಅನುಮತಿ ನೀಡಲಾಗಿದೆ.<br>• ಅದರಂತೆ, ದಿನಾಂಕ 21.03.2022 ರಂದು 35 ಜಿಲ್ಲೆಗಳ ನೇಮಕಾತಿ ಪ್ರಾಧಿಕಾರಿಗಳು ಹಾಗೂ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಅಧಿಸೂಚಿಸಿದ್ದು, ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು 21.05.2022 ಮತ್ತು 22.05.2022 ರಂದು ನಡೆಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>• ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನಾಧರಿಸಿ ಖಾಲಿ ಇರುವ ಮತ್ತು ಖಾಲಿಯಾಗುವ ಶಿಕ್ಷಕರ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. |

ಸಂಖ್ಯೆ: ಇಪಿ 68 ಪಿಎಂಎ 2022

(ಬಿ.ಸಿ. ನಾಗೇಶ್)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ

ಸಕಾಲ ಸಚಿವರು